ಕ್ರ.ಸಂ.	ಪದಾರ್ಥ	ಪ್ರಮಾಣ	ದರ
1.	ಅಕ್ಕಿ	8 ಕೆ.ಜಿ	ಪ್ರತಿ ಕೆ.ಜಿ.ಗೆ ರೂ.3.50
2.	ಗೋಧಿ	2 ಕೆ.ಜಿ	ಪ್ರತಿ ಕೆ.ಜಿ.ಗೆ ರೂ.2.50
3.	ಸಕ್ಕರೆ	1 1/4ಕೆ.ಜಿ.	ಪ್ರತಿ ಕೆ.ಜಿ.ಗೆ ರೂ.11.40
4.	ಸೀಮೆಎಣ್ಣೆ	4 ರಿಂದ 6 ಲೀಟರ್	ಪ್ರತಿ ಲೀಟರ್‌ಗೆ ರೂ.3.00 ರಿಂದ 3.75
5.	ಹೆಚ್ಚುವರಿ	2 ಕೆ.ಜಿ. ಅಕ್ಕಿ	ರೂ. 7.60 ದರದಲ್ಲಿ

ಇ) ತ್ರಿವರ್ಣ ಪಡಿತರ ಚೀಟಿಗಳು ಪ್ರಸ್ತುತ ಚಾಲ್ತಿಯಲ್ಲಿ ಇರುವುದಿಲ್ಲ. 1995ನೇ ಸಾಲಿನಲ್ಲಿ ಈ ತ್ರಿವರ್ಣ ಕಾರ್ಡುಗಳಿಂದ ಮಹಾತ್ಮ ಗಾಂಧೀಜಿಯವರ ಭಾವಚಿತ್ರವಿರುವ ಹಸಿರು ಕಾರ್ಡುಗಳಾಗಿ ಬದಲಾಯಿಸಲಾಗಿದೆ. ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶದ ಹಸಿರು ಕಾರ್ಡುದಾರರಿಗೆ ಆಹಾರದಾನ್ಯಗಳ ವಿತರಣಾ ಪ್ರಮಾಣ ಮತ್ತು ದರಗಳು ಒಂದೇ ರೀತಿ ಆಗಿರುತ್ತವೆ.

ವಿರಾಜಪೇಟೆ ತಾಲ್ಲೂಕಿನಲ್ಲಿ ಕಿರು ವಿದ್ಯುತ್ ಉತ್ಪಾದನಾ ಯೋಜನೆ.

1223 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಸಂಪ್ರಾದಾಯಕ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಕಿರು ವಿದ್ಯುತ್ ಉತ್ಪಾದನಾ ಯೋಜನೆಯ ಸಲುವಾಗಿ ಯಾವ ಯಾವ ಸ್ಥಳಗಳನ್ನು ಆಯ್ಕೆ ಮಾಡಲಾಗಿದೆ ಮತ್ತು ಆಯ್ಕೆ ಮಾಡಿದ ಸ್ಥಳಗಳಿಗೆ ಪರಿಸರ ಇಲಾಖೆ ಅನುಮತಿ ನೀಡಿದೆಯೇ?

ಆ) ಕಿರು ವಿದ್ಯುತ್ ಉತ್ಪಾದನೆಯ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಳ್ಳಲಿದೆಯೇ ಅಥವಾ ಖಾಸಗಿಯವರಿಗೆ ವಹಿಸಿಕೊಡಲಿದೆಯೇ ಹಾಗಿದ್ದಲ್ಲಿ, ಖಾಸಗಿ ಒಡೆತನದವರು ಯಾರು ಮತ್ತು ಎಷ್ಟು ಪ್ರಮಾಣದ ಹಣಹೂಡಿಕೆಯನ್ನು ಈ ಯೋಜನೆಗೆ ಬಳಸಲಿದ್ದಾರೆ? (ವಿವರ ನೀಡುವುದು)

ಶ್ರೀ ಶರಣಬಸಪ್ಪ ದರ್ಶನಾಪುರ್ (ರಾಜ್ಯ ಅಸಂಪ್ರದಾಯಕ ಇಂಧನ ಸಚಿವರು) :

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಈ ಕೆಳಕಂಡ ಕಿರು ಜಲ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಸರ್ಕಾರ ಆಯ್ಕೆ ಮಾಡಿರುತ್ತದೆ.

1. ಕೀರ್ತಿಹೊಳೆ
2. ಇರಪ್ಪು ಜಲಪಾತ
3. ಬಲಯಂತ್ರ ಹೊಳೆ

ಈ ಸ್ಥಳಗಳಿಗೆ ಪರಿಸರ ಇಲಾಖೆಯ ಅನುಮತಿಯನ್ನು ಪೂರ್ಣ ಸ್ಥಳಗಳಿಗೆ ಸಮೀಕ್ಷೆ ಮತ್ತು ವಿವರವಾದ ಯೋಜನಾ ವರದಿ ತಯಾರಿಸಿದ ನಂತರ ಖಾಸಗೀ ಬಂಡವಾಳದಾರರು ತೆಗೆದುಕೊಳ್ಳಬೇಕಾಗಿರುತ್ತದೆ.

ಆ) ಕಿರು ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಸರ್ಕಾರ ಖಾಸಗಿಯವರಿಗೆ ವಹಿಸಿಕೊಡಲಾಗುತ್ತಿದೆ. ವಿರಾಜಪೇಟೆ ತಾಲ್ಲೂಕಿನಲ್ಲಿ ಈ ಕೆಳಕಂಡ ಖಾಸಗಿ ಬಂಡವಾಳದಾರರಿಗೆ ಈ ಯೋಜನೆಗಳನ್ನು ಸರ್ಕಾರ ಮಂಜೂರು ಮಾಡಿರುತ್ತದೆ.

ಸ್ಥಳ	ಸಾಮರ್ಥ್ಯ ಮೆ.ವ್ಯಾ.	ಖಾಸಗೀ ಬಂಡವಾಳ ದಾರರು	ಅಂದಾಜು ಹೂಡಿಕೆ ಹಣ
ಕೀರ್ತಿ ಹೊಳೆ	21.00	ಸುಭಾಷ್ ಪ್ರಾಜೆಕ್ಟ್	9037 ಲಕ್ಷ
ಇರಪ್ಪು ಜಲಪಾತ	5.00	ಯೂನಿವರ್ಸಲ್ ಇಂಜಿನಿಯರಿಂಗ್	2000 ಲಕ್ಷ
ಜಲಯಂತ್ರ ಹೊಳೆ	3.00	ಸ್ಲೊಬಲ್ ಇಂಡಸ್ಟ್ರೀಸ್	1200 ಲಕ್ಷ
ಒಟ್ಟು	**29.00 ಮೆ.ವ್ಯಾ.**		**ರೂ. 12,237 ಲಕ್ಷ**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನ್ಯಾಯ ಬೆಲೆ ಅಂಗಡಿಗಳ ವಿತರಣೆ.

1224 - ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ?

ಅ) ನ್ಯಾಯಬೆಲೆ ಅಂಗಡಿಗಳ ವಿತರಣೆ ಮಾಡುವಾಗ ಯಾವ ಮಾನದಂಡ ಅನುಸರಿಸಲಾಗುತ್ತಿದೆ ?

ಆ) ನ್ಯಾಯಬೆಲೆ ಅಂಗಡಿಗಳ ವಿತರಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಾಕಷ್ಟು ವಿತರಣೆ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ರಾಜ್ಯದಲ್ಲಿ ಒಟ್ಟು ಎಷ್ಟು ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ ಮತ್ತು ಇವುಗಳಲ್ಲಿ ಎಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡಲಾಗಿದೆ ? (ವಿವರ ನೀಡುವುದು)

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ರಾಜ್ಯದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಆದೇಶ 1992ರಡಿ ನಿಯಮಾನುಸಾರ ಮಂಜೂರು ಮಾಡಲಾಗುತ್ತಿದೆ.

ಆ) ಹೌದು.

ಇ) ರಾಜ್ಯದಲ್ಲಿ ಒಟ್ಟು 19,868 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿದ್ದು ಪರಿಶಿಷ್ಟ ಜಾತಿಗೆ 1012 ಮತ್ತು ಪರಿಶಿಷ್ಟ ಪಂಗಡಕ್ಕೆ 348 ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ.